Received on 3/9/2020
WUP

ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ: ಕಾಶಿಇ/13/ಹೆಚ್‌ಕುವಿ/2020-21/ವಿವೇ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:01.09.2020.

# ಸುತ್ತೋಲೆ

ವಿಷಯ : 2020-21ನೇ ಶೈಕ್ಷಣಿಕ ಸಾಲಿಗೆ ಹೆಚ್.ಐ.ವಿ/ಏಡ್ಸ್ ಅಥವಾ ಕುಷ್ಠರೋಗ ಪೀಡಿತ ಪೋಷಕರಿಗೆ (ಬದುಕಿರುವ ಇಲ್ಲವೇ ಮೃತಹೊಂದಿರುವ) ಜನಿಸಿದ, ಪದವಿ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳು ಅಥವಾ ಹೆಚ್‌ಐವಿ/ಏಡ್ಸ್ ಅಥವಾ ಕುಷ್ಠರೋಗ ಪೀಡಿತ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಮತ್ತು ಶಿಷ್ಯವೇತನಕ್ಕೆ ಅರ್ಜಿಗಳನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ:ಇಡಿ/132/ಮಾಹಿತಿ/2013, ಬೆಂಗಳೂರು, ದಿನಾಂಕ:18.11.2013 ಮತ್ತು ಅನುಬಂಧ.
2. ಸರ್ಕಾರದ ಆದೇಶ ಸಂಖ್ಯೆ:ಆಇ/53/ಟಿಎಆರ್/2015, ಬೆಂಗಳೂರು, ದಿ:15.02.2016.
3. ಈ ಕಛೇರಿಯ ಸುತ್ತೋಲೆ ಸಂಖ್ಯೆ:ಕಾಶಿಇ/98/ಹೆಚ್‌ಐವಿ & ಲೆಪ್ರಸಿ/2019-20/ವಿದ್ಯಾರ್ಥಿವೇತನ ದಿ:09.05.2019.
4. ಸರ್ಕಾರದ ಅನುದಾನ ಬಿಡುಗಡೆ ಆದೇಶ ಸಂಖ್ಯೆ:ಇಡಿ/84/ಹೆಚ್‌ಪಿಸಿ/2020, ದಿ:29.06.2020.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2020-21ನೇ ಶೈಕ್ಷಣಿಕ ಸಾಲಿನಲ್ಲಿ ಸರ್ಕಾರಿ/ಖಾಸಗಿ ಅನುದಾನಿತ/ಖಾಸಗಿ ಅನುದಾನರಹಿತ ಪದವಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹೆಚ್‌ಐವಿ/ಏಡ್ಸ್ ಅಥವಾ ಕುಷ್ಠರೋಗ ಪೀಡಿತರಾದ (ಬದುಕಿರುವ ಇಲ್ಲವೇ ಮೃತಹೊಂದಿರುವ) ತಂದೆ ತಾಯಂದಿರಿಗೆ ಜನಿಸಿದ ವಿದ್ಯಾರ್ಥಿಗಳಿಗೆ ಮತ್ತು ಹೆಚ್‌ಐವಿ/ಏಡ್ಸ್ ಅಥವಾ ಕುಷ್ಠರೋಗ ಪೀಡಿತ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣದೊಂದಿಗೆ ವಾರ್ಷಿಕವಾಗಿ ಶಿಷ್ಯವೇತನ ನೀಡುವ ಸಂಬಂಧ ಬಿ.ಎ, ಬಿ.ಕಾಂ, ಬಿ.ಎಸ್ಸಿ, ಬಿ.ಬಿ.ಎಂ ಮತ್ತು ಬಿ.ಸಿ.ಎ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಲು ಈ ಕೆಳಕಂಡಂತೆ ನಿಬಂಧನೆಗಳನ್ನು ವಿಧಿಸಲಾಗಿದೆ.

- 2019-20ನೇ ಸಾಲಿನಲ್ಲಿ ದ್ವಿತೀಯ ಪಿ.ಯು.ಸಿ ಮುಗಿಸಿ 2020-21ನೇ ಸಾಲಿಗೆ ಪ್ರಥಮ ವರ್ಷದ ಬಿ.ಎ, ಬಿ.ಕಾಂ, ಬಿ.ಎಸ್ಸಿ, ಬಿ.ಬಿ.ಎ, ಬಿ.ಸಿ.ಎ, ಅಥವಾ ಬಿ.ಬಿ.ಎಂ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ನೂತನ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಬಹುದು.
- 2020-21ನೇ ಸಾಲಿನಲ್ಲಿ ದ್ವಿತೀಯ ಅಥವಾ ತೃತೀಯ ವರ್ಷದ ಪದವಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ನವೀಕರಣ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಲು ಇಚ್ಛಿಸಿದ್ದಲ್ಲಿ ಹಿಂದಿನ ಎಲ್ಲಾ ಸೆಮಿಸ್ಟರ್‌ನಲ್ಲಿ ಮೊದಲ ಪ್ರಯತ್ನದಲ್ಲಿಯೇ ಕನಿಷ್ಟ ಶೇಕಡ 40ರಷ್ಟು ಅಂಕಗಳನ್ನು ಪಡೆಯುವುದರೊಂದಿಗೆ ಎಲ್ಲಾ ವಿಷಯಗಳಲ್ಲಿ ಉತ್ತೀರ್ಣರಾಗಿರತಕ್ಕದ್ದು ಹಾಗೂ ಎಲ್ಲಾ ಸೆಮಿಸ್ಟರ್‌ಗಳಲ್ಲಿ ಕನಿಷ್ಠ ಶೇಕಡ 75ರಷ್ಟು ಹಾಜರಾತಿಯನ್ನು ಹೊಂದಿರತಕ್ಕದ್ದು.
- ನವೀಕರಣ ವಿದ್ಯಾರ್ಥಿವೇತನ ಪಡೆಯಲು ಇಚ್ಛಿಸುವ ವಿದ್ಯಾರ್ಥಿಗಳು ಭರ್ತಿ ಮಾಡಿದ ಅರ್ಜಿಯೊಂದಿಗೆ ಪ್ರಾಂಶುಪಾಲರಿಂದ ಧೃಡೀಕರಿಸಿದ ಹಿಂದಿನ ಎಲ್ಲಾ ಸೆಮಿಸ್ಟರ್‌ಗಳ ಅಂಕಪಟ್ಟಿಯ ಜೆರಾಕ್ಸ್ ಪ್ರತಿಯನ್ನು, ವ್ಯಾಸಂಗ ಪ್ರಮಾಣ ಪತ್ರ ಮತ್ತು ಪೋಷಕರು/ವಿದ್ಯಾರ್ಥಿಯು ಚಿಕಿತ್ಸೆ ಪಡೆದ ಬಗ್ಗೆ ವೈದ್ಯಕೀಯ ಪ್ರಮಾಣ ಪತ್ರದ ಜೆರಾಕ್ಸ್ ಪ್ರತಿಯನ್ನು ಲಗತ್ತಿಸಿ ಸಲ್ಲಿಸತಕ್ಕದ್ದು.

...2

- ವಿದ್ಯಾರ್ಥಿಯು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದಿಂದ ಯಾವುದೇ ರೀತಿಯ ಇತರೆ ಶಿಷ್ಯವೇತನವನ್ನು ಪಡೆದಿದ್ದಲ್ಲಿ ಸದರಿ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.
- ಸದರಿ ವಿದ್ಯಾರ್ಥಿವೇತನದ ಬಗ್ಗೆ ಮಾಹಿತಿಯನ್ನು ಸೂಚನಾ ಫಲಕದಲ್ಲಿ ಪ್ರಕಟಿಸಿ ಕಾಲೇಜಿನ ಎಲ್ಲಾ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಲು ತಿಳಿಸಲಾಗಿದೆ ಹಾಗೂ ಅರ್ಹ ಸದರಿ ವಿದ್ಯಾರ್ಥಿಗಳಿಗೆ ಅರ್ಜಿಗಳನ್ನು ವಿತರಿಸಿ ಸೂಕ್ತ ಮಾರ್ಗದರ್ಶನದೊಂದಿಗೆ ಭರ್ತಿ ಮಾಡಿಸಿ ಪ್ರಾಂಶುಪಾಲರು ಸದರಿ ಅರ್ಜಿಗಳನ್ನು ದೃಢೀಕರಿಸಿ ಈ ಕಛೇರಿಗೆ ದಿ:30.09.2019 ರೊಳಗೆ ಈ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ.
- ಸದರಿ ಯೋಜನೆಯಡಿ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳ ಬಗ್ಗೆ ಕಾಲೇಜಿನಲ್ಲಿ ಗೌಪ್ಯತೆಯನ್ನು ಕಾಪಾಡುವುದು.
- ನೂತನ ಮತ್ತು ನವೀಕರಣ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸುವ ಅರ್ಹ ವಿದ್ಯಾರ್ಥಿಗಳ ವ್ಯಾಸಂಗ ಪ್ರಮಾಣಪತ್ರವನ್ನು ಪ್ರತಿ ವರ್ಷವೂ ಪ್ರತ್ಯೇಕವಾಗಿ ಅರ್ಜಿ ಜೊತೆಯಲ್ಲಿ ಸಲ್ಲಿಸುವುದು.
- ತಡವಾಗಿ ಸಲ್ಲಿಸಿದ ಮತ್ತು ಅಪೂರ್ಣ ಅರ್ಜಿಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ.
- ಉಲ್ಲೇಖ(2)ರ ಸರ್ಕಾರದ ಆದೇಶದನ್ವಯ ವಿದ್ಯಾರ್ಥಿವೇತನ ಮೊತ್ತವನ್ನು ಫಲಾನುಭವಿ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ನೇರವಾಗಿ ಜಮಾ ಮಾಡಬೇಕಾಗಿರುವುದಿರಂದ ಅರ್ಜಿಯಲ್ಲಿ ವಿದ್ಯಾರ್ಥಿಗಳ ಬ್ಯಾಂಕ್ ಖಾತೆ ಸಂಖ್ಯೆ ಮತ್ತು IFS Code ಗಳನ್ನು ಸ್ಪಷ್ಟವಾಗಿ ನಮೂದಿಸಿ ಪ್ರಾಂಶುಪಾಲರ ದೃಢೀಕರಣದೊಂದಿಗೆ ಸಲ್ಲಿಸಬೇಕು.
- ಈ ಪತ್ರದೊಂದಿಗೆ ಸದರಿ ವಿದ್ಯಾರ್ಥಿವೇತನಕ್ಕೆ ಸಲ್ಲಿಸಬೇಕಾದ ಅರ್ಜಿ ನಮೂನೆಯನ್ನು ಲಗತ್ತಿಸಿದ್ದು, ಸದರಿ ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳ ಪಟ್ಟಿಯನ್ನು ಅರ್ಜಿ ನಮೂನೆಯ ಕಂಡಿಕೆ (ಇ) ನಲ್ಲಿ ತಿಳಿಸಲಾಗಿದ್ದು, ಅದರಂತೆ ಭರ್ತಿ ಮಾಡಿದ ಅರ್ಜಿಗಳನ್ನು ದೃಢೀಕೃತ ಲಗತ್ತುಗಳೊಂದಿಗೆ ಸಲ್ಲಿಸಲು ಸೂಚಿಸಲಾಗಿದೆ.
- ಸದರಿ ಅರ್ಜಿ ನಮೂನೆಗಳನ್ನು ಇಲಾಖಾ ವೆಬ್‌ಸೈಟ್ www.dce.kar.nic.in ಮೂಲಕವೂ ಸಹ ಪಡೆದುಕೊಳ್ಳಬಹುದಾಗಿದೆ.

ಅಡಕ: ಅರ್ಜಿ ನಮೂನೆ

**(ಕರಡು ಪ್ರತಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)**

**ಕಾಲೇಜು ಶಿಕ್ಷಣ ನಿರ್ದೇಶಕರು**

**ಇವರಿಗೆ:**

1. ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳು–ತಮ್ಮ ವ್ಯಾಪ್ತಿಯ ಕಾಲೇಜಿನ ಪ್ರಾಂಶುಪಾಲರುಗಳಿಗೆ ಈ ಬಗ್ಗೆ ಸುತ್ತೋಲೆ ಹೊರಡಿಸಿ ಅಗತ್ಯ ಮಾಹಿತಿ ಒದಗಿಸುವುದು.
2. ಎಲ್ಲಾ ಸರ್ಕಾರಿ/ಖಾಸಗಿ ಅನುದಾನಿತ/ಅನುದಾನರಹಿತ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳು – ಪ್ರಾದೇಶಿಕ ಜಂಟಿ ನಿರ್ದೇಶಕರ ಮುಖಾಂತರ.

**ಪ್ರತಿಯನ್ನು:**

1. ಮಾಹಿತಿ ಅಧಿಕಾರಿಗಳು, ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಸದರಿ ಸುತ್ತೋಲೆ ಮತ್ತು ಅರ್ಜಿಯನ್ನು ವೆಬ್–ಸೈಟ್‌ನಲ್ಲಿ ಅಳವಡಿಸಲು ತಿಳಿಸಿದೆ.
2. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

**GOVERNMENT OF KARNATAKA**

ಕಾಲೇಜು ಶಿಕ್ಷಣ ಇಲಾಖೆ

**DEPARTMENT OF COLLEGIATE EDUCATION**

ವಿಶೇಷ ಪಾಲನೆ ಅಥವಾ ವಿಶೇಷ ವರ್ಗದ ಮಕ್ಕಳ ವಿದ್ಯಾರ್ಥಿವೇತನದ

ನೂತನ/ನವೀಕರಣ ಅರ್ಜಿ ನಮೂನೆ

| |
|---|
| Passport size photograph Attested by Principal |

**SCHOLARSHIP FOR SPECIAL CARE AND SPECIAL CATEGORY CHILDRENS**

**FRESH/RENEWAL** APPLICATION FORM

(ಎ) ಈ ನಮೂನೆಯನ್ನು ಭರ್ತಿ ಮಾಡುವುದಕ್ಕೆ ಮುಂಚಿತವಾಗಿ ಪ್ರತಿಯೊಂದು ಅಂಶವನ್ನು ಜಾಗರೂಕತೆಯಿಂದ ಓದಬೇಕು. ಅರ್ಜಿಯನ್ನು ಸಲ್ಲಿಸಿದ ತರುವಾಯ ಯಾವುದೇ ಬದಲಾವಣೆ ಮಾಡಲು ಅನುಮತಿ ನೀಡಲಾಗುವುದಿಲ್ಲ. ಯಾವುದೇ ನಮೂದು ಸರಿಯಿಲ್ಲ ಎಂದು ಕಂಡು ಬಂದರೆ, ನೀಡಲಾದ ವಿದ್ಯಾರ್ಥಿವೇತನವನ್ನು ತಕ್ಷಣ ರದ್ದು ಮಾಡಲಾಗುವುದು.

Each sentence should be read carefully before the form is filled in. No change will be permitted after the application is submitted. If any entry is found incorrect, the scholarship will be liable to be cancelled forthwith.

(ಬಿ) ಭರ್ತಿ ಮಾಡಿದ ಅರ್ಜಿಗಳನ್ನು ವಿದ್ಯಾರ್ಥಿಯು ವ್ಯಾಸಂಗ ಮಾಡುತ್ತಿರುವ ಕಾಲೇಜಿನ ಪ್ರಾಂಶುಪಾಲರ ಮುಖಾಂತರವೇ ಕಳುಹಿಸಬೇಕು.

Filled application should be sent through the Principal of the College where the student studying.

(ಸಿ) ಅಪೂರ್ಣವಾದ ಅರ್ಜಿಗಳನ್ನು ಹಾಗೂ ನಿಗದಿಪಡಿಸಿದ ದಿನಾಂಕದ ನಂತರ ತಲುಪಿದ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ವಿದ್ಯಾರ್ಥಿವೇತನ ಮಂಜೂರಾತಿಗಾಗಿ ಪರಿಗಣಿಸಲಾಗುವುದಿಲ್ಲ.

Incomplete applications or applications received after the prescribed date will not be considered to scholarship.

| | | |
|---|---|---|
| 1 | ವಿದ್ಯಾರ್ಥಿ/ವಿದ್ಯಾರ್ಥಿನಿಯ ಹೆಸರು :<br>Name of the Student:<br>(In Capital Letters) | |
| 2 | ಲಿಂಗ :<br>SEX : | |
| 3 | ತಂದೆಯ ಹೆಸರು : ಶ್ರೀಮತಿ/ಶ್ರೀ<br>Father's Name : Smt./Sri.<br>(In Capital Letters) | |
| 4 | ಹೆಚ್ಐವಿ/ಕುಷ್ಠರೋಗ ಪೀಡಿತ ಪಾಲಕರ ಹೆಸರು (ರೋಗಕ್ಕೆ ತುತ್ತಾದವರ ಹೆಸರು)<br>Name of the HIV/LEPROSY affected parents (Name of the HIV/LEPROSY affected person) | ತಂದೆ :<br>ಅಥವಾ<br>ತಾಯಿ: |
| 5 | ಯಾವ ರೋಗಕ್ಕೆ ತುತ್ತಾಗಿದ್ದಾರೆ ?<br>Mention disease | 1. HIV<br>2. LEPROSY |
| 6 | ಎಷ್ಟು ವರ್ಷಗಳಿಂದ ?<br>From how many years ? | |
| 7 | ವೈದ್ಯಕೀಯ ಪ್ರಮಾಣ ಪತ್ರ ಲಗತ್ತಿಸಲಾಗಿದೆಯೇ ?<br>Whether the medical certificate attached ? | |
| 8 | ವಿದ್ಯಾರ್ಥಿ ಯಾವ ವರ್ಗಕ್ಕೆ ಸೇರಿದ್ದಾನೆ/ಳೆ<br>To which Category the candidate belongs to (Example:SC/ST/GM) | |

. . . 2

| | | |
|---|---|---|
| 9 | ಪ್ರಸ್ತುತ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ಕಾಲೇಜಿನ ಹೆಸರು ಮತ್ತು ವಿಳಾಸ:<br>Name and Address of the presently pursuing College: | |
| 10 | ಪ್ರಸ್ತುತ ವರ್ಷದಲ್ಲಿ ಯಾವ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ.<br>Mention the Course He / She is studying B.A/B.COM/B.SC./B.B.M./B.C.A. | |
| 11 | (a) ಜನ್ಮ ದಿನಾಂಕ :<br>Date of Birth:<br>(b) ಜನಿಸಿದ ಸ್ಥಳ, ಜಿಲ್ಲೆ ಮತ್ತು ರಾಜ್ಯ:<br>Place of Birth, District and State: | |
| 12 | ವಿದ್ಯಾರ್ಥಿಯ ಪೋಷಕರು ಕೇಂದ್ರ / ರಾಜ್ಯ ಸರ್ಕಾರದ ನೌಕರರೇ ?<br>Whether The Parents are Central or State Government Employee? | |
| 13 | 1. ವಿದ್ಯಾರ್ಥಿಯ ಪ್ರಸಕ್ತ ವಿಳಾಸ ಅಂಚೆ ಕಛೇರಿಯ ಪಿನ್‌ಕೋಡ್‌ನೊಂದಿಗೆ (ಕಡ್ಡಾಯವಾಗಿ)<br>Student Present Address with Pin Code (Compulsary)<br>2. ಖಾಯಂ ವಿಳಾಸ<br>Permanent Address | |

**(ಡಿ) ಈ ಯೋಜನೆಯಡಿಯಲ್ಲಿ ಫಲಾನುಭವಿಗಳಾಗಲು ವಿದ್ಯಾರ್ಥಿಗಳಿಗೆ ಅರ್ಹತೆ ಮತ್ತು ಯೋಜನಾ ವ್ಯಾಪ್ತಿ :**

1. ಹೆಚ್.ಐ.ವಿ./ಏಡ್ಸ್ ಅಥವಾ ಕುಷ್ಟ ರೋಗದಿಂದ ಸೋಂಕಿತರಾಗಿದ್ದು ಬದುಕಿರುವ ಅಥವಾ ಮೃತ ಹೊಂದಿರುವ ತಂದೆತಾಯಿಯರಿಗೆ ಜನಿಸಿದ ಮಕ್ಕಳು.
2. ಪ್ರಸ್ತುತ ರೋಗಗ್ರಸ್ತ ಅಥವಾ ರೋಗಮುಕ್ತವಾಗಿರುವ ಪರಿಸ್ಥಿತಿಯನ್ನು ಪರಿಗಣಿಸದೇ ಹೆಚ್.ಐ.ವಿ./ಏಡ್ಸ್ ಅಥವಾ ಕುಷ್ಟ ರೋಗದಿಂದ ಸೋಂಕಿತರಾದ ವಿದ್ಯಾರ್ಥಿ.
3. ಮೇಲ್ಕಾಣಿಸಿದಂತಹ ವಿದ್ಯಾರ್ಥಿಗಳು ಕರ್ನಾಟಕದ ಯಾವುದೇ ಜಿಲ್ಲೆಯಿಂದ ಬಂದವರಾಗಿರಬಹುದು;
4. ರೋಗಗ್ರಸ್ತ ವಿದ್ಯಾರ್ಥಿಯ ಕುಟುಂಬ ಕರ್ನಾಟಕದಲ್ಲಿ ಕನಿಷ್ಟ 25 ವರ್ಷಗಳ ವಾಸ್ತವ್ಯ ಹೊಂದಿರಬೇಕು.
5. ರೋಗಗ್ರಸ್ತ ವಿದ್ಯಾರ್ಥಿಯು ತನ್ನ ಕುಟುಂಬದೊಂದಿಗೆ ಅಥವಾ ವಿದ್ಯಾರ್ಥಿನಿಲಯ, ಅನಾಥಾಲಯದಲ್ಲಿ ಅಥವಾ ವಸತಿ ನಿಲಯಗಳಲ್ಲಿ ವಾಸಿಸುತ್ತಿರುವವರಾಗಿರಬಹುದು.
6. ವಿದ್ಯಾರ್ಥಿಯು ಅಥವಾ ಅವರ ತಂದೆತಾಯಿಗಳು ಕುಷ್ಠ ರೋಗಕ್ಕೆ ಎಂ.ಡಿ.ಟಿ ಚಿಕಿತ್ಸೆ ಪಡೆದವರಾಗಿರಬೇಕು ಅಥವಾ ಹೆಚ್.ಐ.ವಿ./ಏಡ್ಸ್ ರೋಗಕ್ಕೆ ಎ.ಆರ್.ಟಿ. ಚಿಕಿತ್ಸೆ ಪಡೆದವರಾಗಿರಬೇಕು.
7. ಈ ಯೋಜನೆಯು ಸರ್ಕಾರಿ ಹಾಗೂ ಅನುದಾನಿತ/ಅನುದಾನರಹಿತ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವವರಿಗೆ ಮಾತ್ರ ಅನ್ವಯವಾಗುತ್ತದೆ.
8. ಮೇಲ್ಕಾಣಿಸಿದ ಎಲ್ಲಾ ಅಂಶಗಳಲ್ಲೂ ಅರ್ಹರಾಗಿರುವ ವಿದ್ಯಾರ್ಥಿಗಳು ಪ್ರಮಾಣ ಪತ್ರದ ಅಧ್ಯಯನ, ಡಿಪ್ಲೋಮ ಅಧ್ಯಯನ, ಪದವಿ ಅಧ್ಯಯನ, ಅಥವಾ ಸ್ನಾತಕೋತ್ತರ ಪದವಿ ಅಧ್ಯಯನ ಮಾಡುತ್ತಿರುವವರಾಗಿರಬೇಕು. ಪಿ.ಹೆಚ್.ಡಿ. ಅಧ್ಯಯನದ ವಿದ್ಯಾರ್ಥಿಗಳು ಫೆಲೋಷಿಪ್ ಪಡೆಯುವುದರಿಂದ ಈ ಯೋಜನೆಯಡಿ ಫಲಾನುವಿಯಾಗಲು ಅರ್ಹರಿರುವುದಿಲ್ಲ.

**(ಇ) ಲಗತ್ತುಗಳು :**

**ಸದರಿ ಶಿಷ್ಯವೇತನ ಪಡೆಯ ಬಯಸುವ ವಿದ್ಯಾರ್ಥಿಗಳು ಮೇಲ್ಕಂಡ ನಿಗಧಿತ ನಮೂನೆಯಲ್ಲಿ ಅರ್ಜಿಯನ್ನು ಭರ್ತಿ ಮಾಡಿ ಈ ಕೆಳಕಂಡ ದೃಢೀಕೃತ ದಾಖಲಾತಿಗಳೊಂದಿಗೆ ಕಾಲೇಜಿನ ಪ್ರಾಂಶುಪಾಲರ ಮುಖಾಂತರ ಕಾಲೇಜು ಶಿಕ್ಷಣ ಆಯುಕ್ತರಿಗೆ ಸಲ್ಲಿಸುವುದು.**

1. ಯಾವ ವಿದ್ಯಾರ್ಥಿಗೆ ಅಥವಾ ವಿದ್ಯಾರ್ಥಿಯ ಪೋಷಕರು ಪ್ರಸಕ್ತ ಅಥವಾ ಈ ಹಿಂದೆ ಕುಷ್ಠರೋಗಕ್ಕಾಗಿ ಚಿಕಿತ್ಸೆ ಪಡೆದ ಸಂದರ್ಭದಲ್ಲಿ ಎಂ.ಡಿ.ಟಿ ಪ್ರಮಾಣ ಪತ್ರವನ್ನು ಪಡೆಯುವುದು. ಸದರಿ ಪ್ರಮಾಣ ಪತ್ರಗಳನ್ನು ಜಿಲ್ಲಾ ಕುಷ್ಠರೋಗ ಅಧಿಕಾರಿ/ ಸರ್ಕಾರಿ ಆಸ್ಪತ್ರೆಗಳ ಅಧೀಕ್ಷಕರವರಿಂದ/ಜಿಲ್ಲಾ ವೈದ್ಯಕೀಯ ಅಧಿಕಾರಿಗಳಂದ/ಯಾವುದಾದರೂ ಅಧಿಕೃತ ವೈದ್ಯರಿಂದ ದೃಢೀಕರಿಸಿರಬೇಕು.

. . . 3

2. ಹೆಚ್.ಐ.ವಿ.ಗಾಗಿ ಚಿಕಿತ್ಸೆ ಪಡೆದ ಸಂದರ್ಭದಲ್ಲಿ ಎ.ಆರ್.ಟಿ. ಪ್ರಮಾಣ ಪತ್ರವನ್ನು ಜಿಲ್ಲಾ ವೈದ್ಯಾಧಿಕಾರಿಗಳಿಂದ ದೃಢೀಕರಿಸಿ ಸಲ್ಲಿಸುವುದು. ಹೆಚ್.ಐ.ವಿ/ಏಡ್ಸ್ ಪೀಡಿತ ಪೋಷಕರ ಅಥವಾ ವಿದ್ಯಾರ್ಥಿಗಳ ಸಾಮಾಜಿಕ ಸ್ಥಾನಮಾನಗಳ ವಾಸ್ತವತೆ ಬಗ್ಗೆ, ಸ್ಥಳೀಯ ಸರ್ಕಾರಿ ವೈದ್ಯಾಧಿಕಾರಿಗಳಿಂದ ಪ್ರಮಾಣಪತ್ರವನ್ನು ಪಡೆದು, ಅದಕ್ಕೆ ಜಿಲ್ಲಾ ವೈದ್ಯಾಧಿಕಾರಿಗಳಿಂದ ಮೇಲು ರುಜುವನ್ನು ಮಾಡಿಸಿರಬೇಕು.
3. ಜನ್ಮದಿನಾಂಕವನ್ನು ಪ್ರಮಾಣೀಕರಿಸಲು ಅರ್ಹ ಪ್ರಾಧಿಕಾರದಿಂದ ಹಂಚಿದ ಜನನ ಪ್ರಮಾಣಪತ್ರದ ನಕಲು ಅಥವಾ ಎಸ್.ಎಸ್.ಎಲ್.ಸಿ/10ನೇ ತರಗತಿಯ ಅಂಕಪಟ್ಟಿಯ ನಕಲು ಪ್ರತಿಯನ್ನು ಸಲ್ಲಿಸುವುದು.
4. ನೂತನ ವಿದ್ಯಾರ್ಥಿವೇತನಕ್ಕಾಗಿ ಪಿ.ಯು.ಸಿ ಅಥವಾ 12ನೇ ತರಗತಿಯ ಅಂಕಪಟ್ಟಿಯ ನಕಲು ಪ್ರತಿ ಸಲ್ಲಿಸುವುದು.
5. ನವೀಕರಣ ವಿದ್ಯಾರ್ಥಿವೇತನಕ್ಕಾಗಿ ಹಿಂದಿನ ಪರೀಕ್ಷೆಯ ಎಲ್ಲಾ ಸೆಮಿಸ್ಟರ್‌ನ ದೃಢೀಕೃತ ಅಂಕಪಟ್ಟಿಯನ್ನು ಲಗತ್ತಿಸುವುದು.
6. ವ್ಯಕ್ತಿಯ ಜೊತೆಯಲ್ಲಿನ ಸಂಬಂಧವನ್ನು ಪರಿಶೀಲಿಸಲು ಪಡಿತರ ಚೀಟಿ (Ration Card) ಯ ನಕಲು ಪ್ರತಿಯನ್ನು ಸಲ್ಲಿಸುವುದು.
7. ಕಾಲೇಜಿಗೆ ಪ್ರವೇಶಾತಿ ಪಡೆದಿರುವ ಬಗ್ಗೆ ವ್ಯಾಸಂಗ ಪ್ರಮಾಣಪತ್ರವನ್ನು ಆಯಾಯಾ ಕಾಲೇಜಿನಿಂದ ಪಡೆದು ಸಲ್ಲಿಸುವುದು.
8. ಪೋಷಕರ 25 ವರ್ಷಗಳ ವಾಸ ಪ್ರಮಾಣ ಪತ್ರವನ್ನು ಸಲ್ಲಿಸುವುದು.
9. ವಿದ್ಯಾರ್ಥಿಗಳ ನೈಜತೆ ದೃಢೀಕರಣಕ್ಕಾಗಿ ಆಯಾ ಕಾಲೇಜಿನ ಪ್ರಾಂಶುಪಾಲರು ಜಿಲ್ಲಾ ಶಸ್ತ್ರ ಚಿಕಿತ್ಸಾ ತಜ್ಞರಿಂದ ಪ್ರಮಾಣ ಪತ್ರವನ್ನು ಲಗತ್ತಿಸುವುದು.
10. ವಿದ್ಯಾರ್ಥಿಯ ಆಧಾರ್ ಕಾರ್ಡ್ ಜೆರಾಕ್ಸ್ ಪ್ರತಿಯನ್ನು ಲಗತ್ತಿಸುವುದು.
11. ವಿದ್ಯಾರ್ಥಿಯ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ.

**Particulars of Bank**

| | | |
|---|---|---|
| 1 | Name of the Bank: | |
| 2 | Name of the Branch: | |
| 3 | MICR No.: | |
| 4 | IFS Code: | |
| 5 | Account Type :<br>(SB/Current/Cash credit) | |
| 6 | Student Bank Account No: | |
| 7 | Student/Parents Mobile No: | |

**ಘೋಷಣೆ:** ನಾನು, ಹೆಚ್ಐವಿ/ಕುಷ್ಠರೋಗ ಪೀಡಿತರಾಗಿದ್ದು ನನ್ನ ಮಗ/ಮಗಳು ಮೇಲ್ಕಂಡ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದು ಈ ಅರ್ಜಿಯಲ್ಲಿ ನೀಡಿರುವ ವಿವರಗಳು ಸತ್ಯವೆಂದು ಪ್ರಮಾಣೀಕರಿಸುತ್ತೇನೆ.

**Declaration:** I swear that I am affected from the disease HIV/ Leprosy. My Son/Daughter Studying in the above named College. And I Certified that the particulars made above are correct.

ಸ್ಥಳ :
Place :

ವಿದ್ಯಾರ್ಥಿ/ವಿದ್ಯಾರ್ಥಿನಿಯ ಸಹಿ
**Signature of Applicant**

ದಿನಾಂಕ :
Date :

ರೋಗ ಪೀಡಿತ ಪೋಷಕರ ಸಹಿ
**Signature of the diseased parent**

**ದೃಢೀಕರಣ**

__________________ ಎಂಬ ವಿದ್ಯಾರ್ಥಿ/ವಿದ್ಯಾರ್ಥಿನಿಯು 2020-21ನೇ ಸಾಲಿನಲ್ಲಿ ಈ ಕಾಲೇಜಿನಲ್ಲಿ __________ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ ಹಾಗೂ ಸದರಿ ವಿದ್ಯಾರ್ಥಿವೇತನದ ಹೊರತಾಗಿ ಬೇರೆ ಯಾವುದೇ ವಿದ್ಯಾರ್ಥಿವೇತನಕ್ಕಾಗಿ ಅರ್ಜಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸಲಾಗಿದೆ.

**ಪ್ರಾಂಶುಪಾಲರ ಸಹಿ ಮೊಹರಿನೊಂದಿಗೆ**